ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು

ಸೆಷನ್ಸ್ ಕೇಸ್ ನಂಬ್ರ 34/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಅಬೂಬಕ್ಕರ್ | ಪ್ರಾ.ಸಾಃ 27 |
| ತಂದೆಯ ಹೆಸರು | : | ಶ್ರೀ ಬಾವು ಬ್ಯಾರಿ | ಚಾ.ಸಾಃ 35 |
| ಪ್ರಾಯ | : | 69 ವರ್ಷ | ದಿನಾಂಕಃ 18.01.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಖಾಲಿ | |
| ವಾಸಸ್ಥಳ | | ಕುದುರೆಗುಂಡಿ, ಕೊಪ್ಪ ಚಿಕ್ಕಮಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಸುಮಾರು ಐವತ್ತು ವರ್ಷಗಳಿಂದ ಕೊಪ್ಪ ತಾಲೂಕಿನ ಗೌರಿಹಳ್ಳದಲ್ಲಿ ವಾಸವಾಗಿದ್ದೇನೆ. ನಾನು ಜೀವನಕ್ಕೆ ಮೇಸ್ತ್ರಿ ಮತ್ತು ಕೂಲಿ ಕೆಲಸ ಮಾಡುತ್ತಿದ್ದೆನು. ನನಗೆ ಮೂಲ ಪ್ರಕರಣದ ಪಕೀರ್ ಬಾವ ಯಾರೆಂದು ಗೊತ್ತಿದೆ. ಅವರು ಮಂಗಳೂರಿನ ಉಚ್ಚಿಲದವರು ಮತ್ತು ಅವರು ನನಗೆ ದೂರದಿಂದ ಸಂಬಂಧಿಕರು ಮತ್ತು ನನಗೆ ಐದು ದಿನಗಳ ಕಾಲ ಮೇಸ್ತ್ರಿ ಕೆಲಸವನ್ನು ಕೊಟ್ಟಿದ್ದರು. ಮಹಮ್ಮದ್ ಎಂಬ ಕಂಟ್ರಾಕ್ಟರ್ ಅಲ್ಲಿ ಫ್ಯಾಕ್ಟರಿಯ ಕಟ್ಟಡದ ಕೆಲಸ ಆಗಲು ಬೇಕಾಗಿದ್ದರಿಂದ ಅದರ ತಳಪಾಯವನ್ನು ಹಾಕುವ ಕೆಲಸವನ್ನು ನನಗೆ ಕೊಟ್ಟಿದ್ದರು. ಅಲ್ಲಿ ಒಂದೆ ಕಟ್ಟಡವಿತ್ತು. ಆಚೆಗೆ ಒಂದು ಗುಡಿಸಲು ಇದ್ದು ಅಲ್ಲಿ ಯಾರು ವಾಸವಿದ್ದರು ಎಂದು ಗೊತ್ತಿರುವುದಿಲ್ಲ.

2. ಮೂಲ ಪ್ರಕರಣದ ಅಹಮ್ಮದ್ ಬಾವ ಅಲ್ಲಿಗೆ ಬಂದು ಹೋಗುತ್ತಿದ್ದರು. ನನ್ನ ಮನೆಯಿಂದ ನಾನು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಒಂದುವರೆ ಕಿ. ಮೀ. ದೂರವಿದೆ. ಆರೋಪಿತರ ವಿರುದ್ಧ ಯಾವ ಕಾರಣಕ್ಕಾಗಿ ಕೇಸು ದಾಖಲಾಗಿದೆ ಎಂದು ನನಗೆ ಗೊತ್ತಿರುತ್ತದೆ. ನಾನು ಅಲ್ಲಿ ಐದು ದಿನಗಳ ಕಾಲ ಕೆಲಸ ಮಾಡಿದ ಮೇಲೆ ನನಗೆ ಸಂಬಳ ಕೊಟ್ಟಿದ್ದರು. ಆದರೆ ನನಗೆ ಆ ಸಂಬಳ ಸಾಕಾಗದೆ ಇರುವುದರಿಂದ ನಾನು ಬೇರೆ ಕಡೆಗೆ

ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಕೆಲಸ ಬಿಟ್ಟ ಸುಮಾರು ದಿನಗಳ ನಂತರ ಅಲ್ಲಿ ಬಾಂಬ್ ತಯಾರಿಸುತ್ತಿದ್ದರು ಎಂದು ನನಗೆ ಗೊತ್ತಾಯಿತು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುವುದಿಲ್ಲ.

**(ಈ ಸಮಯದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಕಂಡು ಬಂದಿದ್ದರಿಂದ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುವುದರಿಂದ ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>

3. ನಾನು ಕೆಲಸ ಮಾಡುತ್ತಿದ್ದ ಮನೆಯ ಬಗ್ಗೆ ಕೇಳಿದಾಗ ಅಹಮ್ಮದ್ ಬಾವ ಅದು ಬೀಗದ ಪ್ಯಾಕ್ಟರಿ ತಯಾರಿಸಲು ಕಟ್ಟುತ್ತಿರುವುದಾಗಿ ಹೇಳಿದೆನೆಂದರೆ ಸರಿಯಲ್ಲ. ಅದು ಫ್ಯಾಕ್ಟರಿಯ ತರಹ ಇರಲಿಲ್ಲ ಅದು ವಾಸಕ್ಕೆ ಇರುವ ಮನೆಯ ರೀತಿ ಇತ್ತು ಎಂದರೆ ಸರಿಯಲ್ಲ. ನನ್ನೊಂದಿಗೆ ಗಾರೆ ಕೆಲಸಕ್ಕೆ ಕೊಪ್ಪದ ಪ್ರೇಮ ಮತ್ತು ಶಿವಣ್ಣ ಬಂದಿದ್ದರು ಎಂದರೆ ಸರಿ . ಇದರ ಪಕ್ಕದಲ್ಲಿ ಹುಲ್ಲಿನ ಮನೆಯಲ್ಲಿ ಹಲವಾರು ಜನರು ವಾಸವಾಗಿದ್ದರು ಎಂದರೆ ನಾನು ನೋಡಿಲ್ಲ. ಅವರುಗಳ ಹೆಸರು ಅಹಮ್ಮದ್ ಬಾಯ್ ಆಲಿ ಬಾಯ್ ಇಂಜಿನಿಯರ್ ಯಾಸೀನ್ ಬಾಯ್ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಮನೆಗೆ ಹಲವಾರು ಜನರು ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರ ಬಳಿ ಒಂದು ಬೈಕು ಇದ್ದು ಬಡಾ ಬಾಯ್ ಮತ್ತು ಛೋಟಾ ಬಾಯ್ ಬರುವಾಗ ಬಿಳಿ ಬಣ್ಣದ ಕಾರಿನಲ್ಲಿ ಬರುತ್ತಿದ್ದರು ಎಂದರೆ ನಾನು ನೋಡಿಲ್ಲ. ಇವರಿಗೆ ಪ್ರತೀ ದಿನ ಬೆಳಿಗ್ಗೆ ಅಬ್ಬು ಕರಾಟೆ ಹೇಳಿ ಕೊಡುತ್ತಿದ್ದ. ಯೋಗವನ್ನು ಸಹ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಂಜೆಯ ವೇಳೆಗೆ ಕಬ್ಬಡಿ ಆಡುತ್ತಿದ್ದರು ಎಂದರೆ ಸರಿಯಲ್ಲ. ಮನೆ ಕಟ್ಟುವವರನ್ನು ಬಿಟ್ಟು ಬೇರೆ ಯಾರನ್ನು ಇವರು ಮನೆಯ ಹತ್ತಿರ ಸೇರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಕೆಲವು ಸಮಯ ಇವರೆಲ್ಲರೂ ಒಟ್ಟಿಗೆ ಕುಳಿತುಕೊಂಡು ಮಾತನಾಡುತ್ತಿದ್ದರು ಎಂದರೆ ನನಗೆ

ಗೊತ್ತಿಲ್ಲ. ಇವರು ಆಗಾಗ ಕೋವಿಯನ್ನು ಹಿಡಿದುಕೊಂಡು ಕಾಡಿಗೆ ಹೋಗುತ್ತಿದ್ದರು ಮತ್ತು ಮನೆಯ ಹಿಂಭಾಗ ಚಿಟ್ಟೆಯ ಮೇಲೆ ಕುಳಿತು ಒಂದು ಕೋವಿಯಿಂದ ಗುಂಡನ್ನು ಹಾರಿಸುತ್ತಿದ್ದರು ಎಂದರೆ ಸರಿಯಲ್ಲ. ಅಕ್ಟೋಬರ್ ತಿಂಗಳಿನಲ್ಲಿ ಮಂಗಳೂರಿನಲ್ಲಿ ನಾಲ್ಕು ಜನರನ್ನು ಪೋಲೀಸರು ಹಿಡಿದಿದ್ದು ಅವರೆಲ್ಲರೂ ವಿಠಲಮಕ್ಕಿಯಲ್ಲಿದ್ದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿ.

ಈಗ ಓದಿ ಹೇಳಿದಂತೆ "**ಈ ಮನೆಯ ಬಗ್ಗೆ ................ಅಹಮ್ಮದ್ ಬಾವ ಹೇಳಿದ್ದ** " ಎಂದು ನಿಶಾನೆ ಪಿ-42 ರ ಪ್ರಕಾರ ಮತ್ತು ಇದರ ಪಕ್ಕದ ಹುಲ್ಲಿನ ಮನೆಯಲ್ಲಿ ............ಗುಂಡನ್ನು ಹಾಜರಿಸುತ್ತಿದ್ದರು ಎಂದು ನಿಶಾನೆ ಪಿ-42(ಎ) ಪ್ರಕಾರ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿ.ಪಿ.42 ಮತ್ತು ನಿ.ಪಿ.42(ಎ) ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಕೂಡ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 10 ನೇ ಆರೋಪಿ ಪರ ಶ್ರೀ ಎಸ್.ಆರ್.ಎಫ್. ವಕೀಲರಿಂದಃ</u>

(10 ನೇ ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದಾರೆ.)

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.